ಲಚ್ಚರ್ ಅದೀರಿ. ಪೇಪರನಾಗ ಬರೀತೀರಿ. ಇಷ್ಟು ಸಣ್ಣ ವಿಷಯ ಗೊತ್ತಾಗದಿಲ್ಲ? ಎಲ್ಲಾನ ಬ್ಯಾರೆ ಕಡಿ ಮನಿ ಮಾಡ್ರಿ' ಎಂದು ಎಚ್ಚರಿಸಿದರು.

ಈಗ ಮಿಟ್ಟುವನ್ನು ಗೃಹಬಂಧನದಿಂದ ಬಿಡುಗಡೆ ಮಾಡಲೇಬೇಕಾಯಿತು. ಅದು ಎರಡು ದಿನ ಕಣ್ಮರೆಯಾಯಿತು. ಮೂರನೇ ದಿನ ಹಡುನಾಯಿಗಳ ಆಕ್ರಮಣ ತಾಳಲಾರದೆ ಓಡಿಬಂದು ಮನೆಯಲ್ಲಿ ಅಡಗತೊಡಗಿತು. ಮನೆಯೆದುರು ಗುಂಪುಗೂಡುತ್ತಿದ್ದ ಬೀದಿಕಾಮಣ್ಣಗಳು 'ಅದೆಂಗ ಹೊರಗ ಬಿಡಂಗಿಲ್ಲ, ನೋಡತೀವಿ' ಎಂಬಂತೆ ಮುಷ್ಕರ ಆರಂಭಿಸಿದರು. ರೋಸಿಹೋದ ಬಾನು ಮಿಟ್ಟುವನ್ನು ಆಟೊದಲ್ಲಿ ಕೂರಿಸಿಕೊಂಡು ದೂರ ಬಿಟ್ಟುಬಂದಳು. ನನಗೆ ನಿರಾಳತೆ ಮತ್ತು ಬೇಸರದ ಮಿಶ್ರ ಭಾವನೆ. ಅವಳು ಮಾಡಿದ್ದು ಸರಿ ಅನಿಸುತ್ತಿದ್ದರೂ 'ಛೇ! ನೀನು ಇಷ್ಟು ಕಠೋರ ಅಂದುಕೊಂಡಿರಲಿಲ್ಲ' ಎಂದು ಗೊಣಗಿದೆ. ಮನೆಯೆಲ್ಲ ಭಣಭಣ. ಮಕ್ಕಳು ನಾಯಿ ಬರುವ ತನಕ ಊಟ ಮಾಡುವುದಿಲ್ಲ ಎಂದು ಕಡ್ಡಿ ಮುರಿದಂತೆ ಹೇಳಿದವು. ಹುಡುಕಿ ಹೊರಡಲೇಬೇಕಾಯಿತು. ಸ್ಕೂಟರು ಹಾಕಿಕೊಂಡು ಬೀದಿಬೀದಿ ಸುತ್ತಿದೆವು. ದೇವರೆ ಅದು ಸಿಗದಿರಲಿ ಎಂದು ನಾನು ಒಳಗೇ ಹಾರೈಸುತ್ತಿದ್ದೆ. ವರ್ಷದಿಂದ ಮಗುವಿನಂತೆ ಸಾಕಿದ್ದ ಬಾನು ಸಿಟ್ಟಿನ ಭರದಲ್ಲಿ ಮಾಡಿದ ಕೆಲಸಕ್ಕೀಗ ಪರಿತಪಿಸುತ್ತಿದ್ದಳು. ಮಿಟ್ಟು ಕೊನೆಗೂ ಸಿಗಲಿಲ್ಲ.

ಜೀವನದಲ್ಲಿ ಎಂದೂ ನಾಯಿ ಸಾಕಬಾರದು ಎಂದು ಸಂಕಲ್ಪ ಮಾಡಿದೆವು. ಅವು ಎಷ್ಟು ಪ್ರೀತಿಕೊಡುತ್ತವೆ? ಎಂತಹ ವ್ಯಥೆ ತರುತ್ತವೆ? ಮಾನವ ನಾಗರಿಕತೆಯು ಅವುಗಳ ನೆನಪುಗಳಿಂದ ತುಂಬಿಹೋಗಿದೆ. ಬೇಟೆಗಾರರಿಗೆ ನಾಯಿಗಳ ಜತೆ ಎಂತಹ ಆಪ್ತ ಸಂಬಂಧವಿದೆ ಎಂಬುದನ್ನು ಗುಡ್ಡಬೆಟ್ಟಗಳ ಪ್ರದೇಶದಲ್ಲಿ ಬದುಕುತ್ತಿರುವ ನಾನು ಕಣ್ಣಾರೆ ಕಂಡಿದ್ದೇನೆ. ಕುವೆಂಪು – ತೇಜಸ್ವಿ ಕಾದಂಬರಿಗಳಂತೂ ಬೇಟೆನಾಯಿಗಳಿಂದ ತುಂಬಿ ಹೋಗಿವೆ. ಕುರಿಗಾಹಿಗಳಿಗಂತೂ ನಾಯಿಗಳು ಬ್ಲಾಕ್ ಕಮಾಂಡೊಗಳಿದ್ದಂತೆ. ಕರ್ನಾಟಕದಲ್ಲಿ ಬೇಟೆಯಲ್ಲಿ ಸಾಹಸ ತೋರಿ ಮಡಿದ ನಾಯಿಗಳಿಗೆ ನಿಲ್ಲಿಸಲಾದ ವೀರಗಲ್ಲುಗಳು, ಕಟ್ಟಿಸಿದ ಸಮಾಧಿಗಳು, ಬರೆಸಲಾದ ಶಾಸನಗಳು ಅಪಾರವಾಗಿರುವುದು ಆಶ್ಚರ್ಯವಿಲ್ಲ. ಬಹಳ ಹಿಂದೆ ಮಲೆನಾಡ ಕಡೆಯ ಯುವಕನೊಬ್ಬ 'ಕರ್ನಾಟಕ ಸಂಸ್ಕೃತಿಯಲ್ಲಿ ನಾಯಿ – ಒಂದು ಅಧ್ಯಯನ' ಎಂಬ ವಿಷಯದಲ್ಲಿ ಸಂಶೋಧನೆ ಮಾಡುತ್ತೇನೆಂದು ಬಂದಿದ್ದನು. ವಿಷಯ ಪರಿಶೀಲನ ಕಮಿಟಿಯಲ್ಲಿದ್ದ ಒಬ್ಬ ವಿದ್ವಾಂಸರು ಅದನ್ನು ಕೇಳಿದೊಡನೆ ಗೊಳ್ಳನೆ ನಕ್ಕರು. ಆತ ನಿಮ್ಮ ಪದವಿಯೇ ಬೇಡವೆಂದು ಕನಲಿ ಹೊರಟು ಹೋಗಿದ್ದ. ಈಗ ಅನಿಸುತ್ತಿದೆ, ಅದು ಘನವಾದ ವಿಷಯವಾಗಿತ್ತು ಎಂದು.

ಯೂರೋಪಿಯನರ ಶ್ವಾನಪ್ರೀತಿ ದೊಡ್ಡದು. ಕರ್ನಾಟಕದಲ್ಲಿರುವ ಆಂಗ್ಲರ ಮಸಣಗಳಲ್ಲಿ ನಾಯಿಸಮಾಧಿಗಳ ಮೇಲೆ ಕೆತ್ತಿಸಲಾದ ಮರಣಶಾಸನಗಳು ಅಪೂರ್ವ ಶೋಕಕವಿತೆಗಳಂತಿವೆ. ತನ್ನೊಡೆಯನ ಜೊತೆ ಬೇಟೆಗೆಂದು ಹೋಗಿದ್ದ ನಾಯೊಂದು, ಆಕಸ್ಮಾತ್ ಮಡಿದ ಒಡೆಯನ ಶವದ ಬಳಿ ಹತ್ತಾರು ದಿನಗಳಿಂದ ಕಾದು ಕುಳಿತಿದ್ದ ಪ್ರಸಂಗವೊಂದರ ಮೇಲಿನ 'ಸ್ವಾಮಿಭಕ್ತಿ' ಪದ್ಯವನ್ನು ಬಾಲ್ಯದಲ್ಲಿ ಓದಿದ್ದು ನೆನಪಾಗುತ್ತಿದೆ. ಈಗಲೂ ಹಂಪಿಗೆ ಬರುವ ಬಿಳಿಯರು ಬಸ್ಸುನಿಲ್ದಾಣದಲ್ಲಿ ಕಾಯುವಾಗ, ಬಿಡಾಡಿ ನಾಯಿಗಳಿಗೆ ಮುದ್ದು ಮಾಡುವುದನ್ನು ನೋಡಬಹುದು. ನಮ್ಮನ್ನು ನಾಯಿಗಳಿಗಿಂತ ಕೀಳಾಗಿ ಕಾಣುವ ಈ ಜನ, ನಮ್ಮದೇ ನಾಯಿಗಳಿಗೆ ತೋರುವ ಈ ಪ್ರೀತಿ ಅರ್ಥವಾಗುವುದಿಲ್ಲ. ನಾಯಿಪ್ರೀತಿಗೆ ನಮ್ಮಲ್ಲೂ